**<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>**

**<u>ಸಿ.ಸಿ.ನಂ280/2016</u>**

ಅಸಾಃ 1 (ಚಾಸಾ-1)

| | |
|---|---|
| ಹೆಸರು | ಯಮನವ್ವ ತೇಲಿ |
| ತಂದೆಯ /ಗಂಡನ ಹೆಸರು | ಶಂಕರ |
| ವಯಸ್ಸು | 50 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಚಿಮ್ಮಡ |

ದಿನಾಂಕ 19-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಚಾಸಾ- 4 ನನ್ನ ಗಂಡ . ಚಾಸಾ- 5 ನನ್ನ ಮಗಳು ಚಾಸಾ- 6 ನನ್ನ ಅಳಿಯ . ನನಗೆ ಚಾಸಾ- 2 , 3,7 ರಿಂದ 9 ಮತ್ತು ಆರೋಪಿತರ ಪರಿಚಯ ಇದೆ . ಸುಮಾರು 9 ವರ್ಷಗಳ ಹಿಂದೆ ಚಿಮ್ಮಡದ ಕುಂಬಾರ ಓಣಿಯಲ್ಲಿ ಇರುವ ನಮ್ಮ ಮನೆಯಲ್ಲಿ ನಾನು , ಚಾಸಾ- 4 ಮತ್ತು 5 ರವರು ಇದ್ದಾಗ ಸಂಜೆ ಹೊತ್ತಿಗೆ ಆರೋಪಿತರು ಬಂದು ನಮಗೆ ಹೊಡಿ ಬಡಿ ಮಾಡಿರುತ್ತಾರೆ . ಆರೋಪಿತರು ಚಾಸಾ- 5 ರವರ ಕೈ ಹಿಡಿದು ಎಳೆದಾಡಿದರು ಮತ್ತು ಚಾಸಾ- 4 ರವರನ್ನು ನೆಲಕ್ಕೆ ಕೆಡವಿದರು . ನಂತರ ಚಾಸಾ- 6 ರಿಂದ 8 ರವರು ಬಂದು ಜಗಳ ಬಿಡಿಸಿದರು . ನಂತರ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ . ಆರೋಪಿತರು ನನ್ನನ್ನು ಜಗ್ಗಾಡಿ ಇಟ್ಟಂಗಿ ಬಟ್ಟೆಯಿಂದ ಬಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ . ನಂತರ ನಾನು ನನ್ನ ಅಳಿಯನಾದ ಚಾಸಾ- 9 ರವರ ಮೂಲಕ ದೂರನ್ನು ಕೊಟ್ಟಿರುತ್ತೇನೆ . ನಂತರ ಪೋಲಿಸರು ನಮ್ಮ ಮನೆಗೆ ಬಂದು ಪಂಚನಾಮೆ ಮಾಡಿ ಫೊಟೋ ತೆಗೆದಿರುತ್ತಾರೆ .

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆಯು ಫಿರ್ಯಾದಿಯಾಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು . ಸಾಕ್ಷಿ ತಾನು ಇರುವ 3 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು .

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ಆರೋಪಿತರ ವಿರುದ್ದ ನ್ಯಾಯಾಲಯದಲ್ಲಿ ದಾವೆ ಮಾಡಿದ್ದರಿಂದ ಸಿಟ್ಟಾಗಿ ಆರೋಪಿತರು ಗೈರ ಕಾಯ್ದಿಶೀರ ಮಂಡಳಿಯಾಗಿ ನಮ್ಮ ಮನೆಯ ಮುಂದೆ ನಮ್ಮ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಾಡಿ 04 ನೇ ಆರೋಪಿ ನನ್ನ ಕೈ ಹಿಡಿದು ಎಳೆದಾಡಿ ಅವಮಾನ ಪಡಿಸಿ ನನ್ನನ್ನು ಕೆಳಗೆ ಬಿಳಿಸಿ ಕೈಯಿಂದ ಹೊಡೆಯಲು ಬಂದಾಗ ನನ್ನ ಮಗಳು ಜಗಳ ಬಿಡಿಸಲು ಬಂದಿದ್ದು ಆಗ ಆಕೆಗೆ 8 ನೇ

ಆರೋಪಿ ಕೈಯನ್ನು ತಿರುವಿ ಹೊಡೆದು ಅವಮಾನ ಪಡಿಸಿದ್ದು 1 ರಿಂದ 3 ನೇ ಆರೋಪಿತರು ನನ್ನ ಗಂಡನಿಗೆ ತೆಕ್ಕೆಗೆ ಬಡಿದು ಕೆಳಗೆ ಕೆಡವಿ ಕೈಯಿಂದ ಹೊಡಿ ಬಡಿ ಮಾಡಿದ್ದು ಅಲ್ಲದೇ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಹೇಳಿ ನಿಪಿ-1 ರಂತೆ ಚಾಸಾ- 6 ರವರ ಮೂಲಕ ಪಿರ್ಯಾದಿ ಸಲ್ಲಿಸಿದ್ದೇನೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಜಿ ಕೆ ವಕೀಲರಿಂದ:-

ನಮ್ಮ ಮತ್ತು ಆರೋಪಿತರ ಮನೆ ಒಂದೊಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿಯಲ್ಲ . ನಿಪಿ-1 ನ್ನು ಬರೆಯಲು ಮಾಹಿತಿಯನ್ನು ಚಾಸಾ- 9 ರವರು ನೀಡಿರುತ್ತಾರೆ .ನಿಪಿ-1 ರಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ಜಾಗೆಯ ಸಲುವಾಗಿ ಜಗಳ ಇದೆ ಎಂದು ಬರೆಸಿದೆ ಎಂದರೆ ಸರಿ . ನಮ್ಮ ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ತಂಟೆ ತಕರಾರು ಇತ್ತು ಎಂದರೆ ಸರಿಯಲ್ಲ . ನಮ್ಮ ನಡುವೆ ಸಿವಿಲ್ ವ್ಯಾಜ್ಯ ಇದೆ ಎಂದರೆ ಸರಿಯಲ್ಲ . ಸಿವಿಲ್ ವ್ಯಾಜ್ಯ ಇರುವ ಕಾರಣ ಆರೋಪಿತರ ಮೇಲೆ ಖೊಟ್ಟಿ ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದಿನಾಂಕ 31-10-2015 ರಂದು ಆರೋಪಿತರು ನನಗೆ ಮತ್ತು ನನ್ನ ಮಗಳಿಗೆ ಹೊಡೆದು ಅವಮಾನ ಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಬಂದು ಕೆಳಗೆ ಕೆಡವಿ , ಅವಾಚ್ಯವಾಗಿ ಬೈದು ಜೀವ ಬದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿದಾರರು ಬಂದು ಜಗಳವನ್ನು ಬಿಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಪೋಲಿಸರು ನಮ್ಮ ಮನೆಗೆ ಬಂದು ಪಂಚನಾಮೆ ಮಾಡಿ ನಿಪಿ- 2 ರಿಂದ 4 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಸಿವಿಲ್ ದಾವೆಗೆ ಅನುಕೂಲವಾಗಲೀ ಎಂದು ಖೊಟ್ಟಿ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಖೊಟ್ಟಿ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

sd-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.